ಮಾತುಗಳಷ್ಟು ಪ್ರಮಾಣದಲ್ಲಿ ಮತ್ತ್ಯಾವ ವಿಷಯದಲ್ಲೂ ಆಗಿರಲಿಕ್ಕಿಲ್ಲ ಅನಿಸುತ್ತದೆ. ವಚನಕಾರರಂತೂ ನುಡಿಯ ಬಗ್ಗೆ ಅದೆಷ್ಟು ಹೇಳಿದ್ದಾರೆ! ಅದರಲ್ಲೂ 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂಬುದು ಮಾತಿನಲ್ಲಿ ಬಹುವಚನ, ಸೌಜನ್ಯದ ಬಗ್ಗೆಯೇ ಹೇಳುತ್ತದೆ. ಗೌರವಾರ್ಥವಾಗಿ, ಪ್ರೀತ್ಯರ್ಥವಾಗಿ ಮತ್ತು ಶಿಷ್ಟಾಚಾರದ ಪಾಲನೆ ದೃಷ್ಟಿಯಿಂದ ನಾವು ಬಹುವಚನವನ್ನು ಆಡುವುದುಂಟು. ಏಕವಚನ ಯಾವಾಗಲೂ ಹತ್ತಿರದ ಸಂಬಂಧಗಳಲ್ಲಿ, ಆತ್ಮೀಯರಲ್ಲಿ ಪ್ರಯೋಗವಾಗುವುದುಂಟು. ಆದರೆ ಕೆಲವು 'ಏಕವಚನಕಾರರು' ಭೇಟಿಯಾಗುತ್ತಿದ್ದಂತೆ ಏಕವಚನದಲ್ಲಿ ಕರೆಯುತ್ತ ಹತ್ತಿರವಾಗಿಬಿಡುತ್ತಾರೆ. ಬೆಳಗಾವಿಯ ನನ್ನ ಗೆಳೆಯನೊಬ್ಬ ನಮ್ಮ ಮೊದಲ ಭೇಟಿಯಲ್ಲಿಯೇ ನಮ್ಮದು ಹಲವು ವರ್ಷಗಳ ಪರಿಚಯವಿರುವಂತೆ ಏಕವಚನದಲ್ಲಿಯೇ ಮಾತಿಗಿಳಿದಾಗ ನಾನು ತುಸು ವಿಚಲಿತನಾದೆ! ನಮ್ಮಿಬ್ಬರ ನಡುವೆ ಸಂಭಾಷಣೆ ಸಾಗುತ್ತಿದ್ದಂತೆ ನಾನೂ ಏಕವಚನ ಪ್ರಯೋಗಿಸಿ ಒಂದು ರೀತಿಯ ಮುಯ್ಯಿ ತೀರಿಸಿಕೊಂಡೆ! ಅದೇ ಅನ್ಯೋನ್ಯತೆ ಇಬ್ಬರಲ್ಲಿ ಈಗಲೂ ಮುಂದುವರೆದು ಬೆಳೆದುಕೊಂಡು ಬಂದಿದೆ.

ಈ ಏಕವಚನ ಮತ್ತು ಬಹುವಚನ ಎಂಬೆರಡು ಪ್ರತ್ಯಯಗಳು ಎಷ್ಟೊಂದು ಅರ್ಥಪೂರ್ಣವಾಗಿವೆ ಎಂಬುದನ್ನು ನಾವು ಗಮನಿಸಬೇಕು. ಏಕ ಎಂದರೆ ಒಂದು, ಬಹು ಎಂದರೆ ಒಂದಕ್ಕಿಂತ ಹೆಚ್ಚು ಎಂದು ಅರ್ಥವಲ್ಲವೇ. ಅದರಂತೆ, ಏಕವಚನದಲ್ಲಿ ಸಂಬೋಧಿಸಿಕೊಳ್ಳುವ ವ್ಯಕ್ತಿ ಯಾವಾಗಲೂ ಒಂದೇ ವಚನ ಅಂದರೆ ಏಕವಚನದಲ್ಲಿಯೇ ಕರೆಯಿಸಿಕೊಳ್ಳುತ್ತಾನೆ. ಉದಾಹರಣೆಗೆ: 'ರಾಮ್ಯಾ' ಎಂಬುವವ ಅವನು ಎದುರಿದ್ದರೂ, ಇರದಿದ್ದರೂ 'ರಾಮ್ಯಾ'ನೇ ಆಗಿರುತ್ತಾನೆ. ಆದರೆ ಬಹುವಚನದಲ್ಲಿ ಕರೆಯಿಸಿಕೊಳ್ಳುವ ಬಹಳ ಮಂದಿ ಹಾಗಲ್ಲ. ಉದಾಹರಣೆಗೆ: 'ಬಸವರಾಜ' ಎಂಬುವವ ಅವನು ಮುಂದಿದ್ದಾಗ ಮಾತ್ರ 'ಬಸವರಾಜ' ಅಂತಲೂ, ಮುಂದಿಲ್ಲದಿದ್ದಾಗ 'ಬಸವ', 'ಬಸ್ಯಾ...', 'ಟಿಸ್ಯಾ' ಹೀಗೆ ಇನ್ನೂ ವಿಧವಿಧವಾದ 'ಬಹು' ವಚನದಲ್ಲಿ ಕರೆಸಿಕೊಳ್ಳುತ್ತಾರೆ! ಎದುರಿದ್ದಾಗ ಮಾತ್ರ ಬಹುವಚನ, ಇಲ್ಲದಿದ್ದಾಗ ಏಕವಚನ, ಕಹಿವಚನ... ಇತ್ಯಾದಿಗಳು ಪ್ರಯೋಗವಾಗುತ್ತವೆ. ಈ ರೀತಿಯ ಉಭಯ ವಚನಗಳಿಗೆ ಈಡಾಗುವವರು – ಕಚೇರಿಯಲ್ಲಿ ಮೇಲಧಿಕಾರಿ, ಮನೆಯಲ್ಲಿ ಅತ್ತೆ-ಮಾವ, ಕೆಲ ದೊಡ್ಡವರೆನ್ನಿಸಿಕೊಂಡವರು ಬಹುವಚನಕ್ಕೂ ಏಕವಚನಕ್ಕೂ ತುತ್ತಾಗುತ್ತಾರೆ. ಮಾತಿಗೊಮ್ಮೆ ಸಾರ್... ಸಾರ್... ಎಂದು ಕರೆಸಿಕೊಂಡ ಮೇಲಧಿಕಾರಿ ಎದುರಿಲ್ಲವೆಂದೊಡನೆ ಸೂ...ಮಗ, ಬೋ...ಮಗ ಇನ್ನೂ ಏನೇನು ಆಗಿಬಿಡುತ್ತಾನೆ. 'ಮೊದಲ ನಾಷ್ಟಾ ಮಾಡ್ರಿ, ಹಿಕ್ಕಟ್ಟ ಜ್ವಾಳಾ ಹಸಾ ಮಾಡಿರೆಂತ...' ಅಂತ ಅತ್ತೆಯನ್ನು ಉಪಚಾರ ಮಾಡುವ ಸೊಸೆಯು, ಅದೇ ಅತ್ತೆ ಮನೆಯಲ್ಲಿಲ್ಲದಿದ್ದಾಗ 'ಸುಡುಗಾಡಿಗೆ ಸಣೇಕ ಮಾಡ್ಯಾಳ, ಇನ್ನ... ರೇಶ್ಮಿ ಸೀರಿ ತಗೊಂಬಾ, ಮೇಲಗುಂಡಿನ ಸರ ಮಾಡಿಸು ಅಂತ ಮಗಗ ಉಪದ್ರ ಹಚ್ಚತಾಳ ಮುದೋಡಿ' ಅಂತ ಹೀಯಾಳಿಸುವುದನ್ನು ಕೇಳಿದ್ದೇನೆ. ಅದಕ್ಕೆ ನಮ್ಮ ಜನಪದರು 'ಮಾತಿನಾಗೊಂದು, ಮನದಾಗೊಂದು' ಇರಬಾರದು ಅಂತ ಹೇಳುತ್ತಿದ್ದರು. ಅವರು 'ಬೆಲ್ಲ ಇರದಿದ್ದರೂ ಬೆಲ್ಲದಂಥ ಎರಡು ಮಾತು' ಆದರೂ ಆಡುವವರು.

ಉಭಯ ವಚನದ ಪ್ರಯೋಗಕ್ಕೀಡಾಗುವ ಇನ್ನೊಂದು ಪ್ರಾಣಿಯೆಂದರೆ 'ಗಂಡ'! ಅವನು ನಾಲ್ಕು ಜನಗಳ ಮಧ್ಯೆ ಇದ್ದರೆ 'ರ್ರೀ... ಏನ್ರೀ...', 'ಚಹಾ ತುಗೋತಿರೆನು...', 'ಜಳಕಾ ಮಾಡ್ರೆಲಾ...' ಅಂತೆಂದು ಹೆಂಡತಿಯಿಂದ ಉಕ್ಕುವ ಬಹುವಚನಗಳು; ಏಕಾಂತವಾಗಿದ್ದಾಗ ಏಕವಚನ, ಅರ್ಧವಚನ ಇನ್ನೂ ಬಗೆ ಬಗೆಯ ವಚನಗಳು ಹೊರಡುತ್ತವೆಂಬುದು ಗುಟ್ಟಿನ ವಿಷಯವೇನಲ್ಲ. ಪ್ರೀತಿಯೆಂಬುದಿದ್ದಾಗ ಯಾವ ವಚನ ಪ್ರಯೋಗವಾದರೂ ಅದು ಮುಖ್ಯವಾಗುವುದಿಲ್ಲ. ಆದರೆ ನಮ್ಮ ಭಾರತೀಯ ಪರಂಪರೆಯಲ್ಲಿ ಗಂಡನನ್ನು ಹೆಂಡತಿ ಬಹುವಚನದಿಂದ ಕರೆಯಬೇಕು, ಗಂಡ ಹೆಂಡತಿಯನ್ನು ಏಕವಚನವಲ್ಲದೇ ಹೇಗೆ ಬೇಕೋ ಹಾಗೆ ಕರೆಯಬಹುದು ಎಂಬುದು ಪಿತೃಸಂಸ್ಕೃತಿಯನ್ನು ಯಾವತ್ತೂ ಜೀವಂತವಾಗಿಡುವ ಮತ್ತು ಗಂಡಸನ್ನು ಯಾಜಮಾನ್ಯ ಸಂಸ್ಕೃತಿಯ ವಾರಸುದಾರನನ್ನಾಗಿ ಪೊರೆಯಬೇಕೆಂಬ ಪ್ರತೀಕಗಳೇ ಹೊರತು ಬೇರೇನಲ್ಲ. ಇದಕ್ಕೆ ಹೊರತಾಗಿ ಪರಸ್ಪರ ಸ್ನೇಹಿತರಂತಿರುವ ಕೆಲವು ದಂಪತಿಗಳು ಮಾತ್ರ ಈ ಬಹುವಚನದ ಹಂಗಿಲ್ಲದೇ ಬಹಿರಂಗವಾಗಿಯೂ ಸಹಿತ ಪರಸ್ಪರ ಏಕವಚನದಲ್ಲಿ,